**ಡಿ.ಡಬ್ಲ್ಯೂ-1**

**ದಿನಾಂಕಃ 14-10-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-**

ವಾದಿ ಚೀಟಿ ವ್ಯವಹಾರ ಮಾಡುತ್ತಾರೆಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ನನ್ನ ತಾಯಿ ವಾದಿ ನಡೆಸುತ್ತಿದ್ದ ಚೀಟಿ ವ್ಯವಹಾರದಲ್ಲಿ ಭಾಗಿಯಾಗಿದ್ದಳು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಚೀಟಿ ವ್ಯವಹಾರದ ಭದ್ರತೆಗಾಗಿ ವಾದಿ 4 ಸಹಿ ಮಾಡಿದ ಚೆಕ್‌ಗಳನ್ನು ಮತ್ತು ಖಾಲಿ ಪ್ರನೋಟ್ ಹಾಗೂ ಹಣ ಸಂದ ರಶೀದಿಗಳಲ್ಲಿ ಸಹಿಗಳನ್ನು ಪಡೆದಿರುತ್ತಾರೆಂದು ತೋರಿಸಲು ನನ್ನ ಬಳಿ ಆಧಾರ ಇಲ್ಲ. ಅದೇ ರೀತಿ ನನ್ನ ತಾಯಿ ಚೀಟಿ ವ್ಯವಹಾರದ ಹಣವನ್ನು ಮರಳಿಸಿರುತ್ತಾರೆಂದು ತೋರಿಸಲು ನನ್ನ ಬಳಿ ಆಧಾರ ಇಲ್ಲ. ಈ ದಾವೆ ಹಾಕುವ 2 ವರ್ಷ ಮೊದಲೇ ಚೀಟಿ ವ್ಯವಹಾರದ ಹಣವನ್ನು ನನ್ನ ತಾಯಿ ವಾದಿಗೆ ಕೊಟ್ಟಿರುತ್ತಾರೆ.  ಈ ರೀತಿ ಹಣ ಸಂದಾಯ ಆದ ಮೇಲೆ ನಾನು ಕೊಟ್ಟ ಚೆಕ್ ಗಳನ್ನು ಪ್ರನೋಟ್ ಮತ್ತು ಹಣ ಸಂದ ರಶೀದಿಗಳನ್ನು ಮರಳಿ ಕೊಡುವಂತೆ ವಾದಿಗೆ ನೋಟೀಸು ಕೊಟ್ಟಿರುವುದಿಲ್ಲ. ನನ್ನ ತಾಯಿ ಮತ್ತು ವಾದಿ ಇಬ್ಬರು ಸ್ನೇಹಿತರ ಎಂದರೆ ಸರಿ. 2017 ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಳ್ಳಿಕೆರೆ ಗ್ರಾಮದಲ್ಲಿ ವಾಸವಿದ್ದೆ ಎಂದರೆ ಸರಿ. ವಾದಿ ನನ್ನ ತಾಯಿಯ ಸ್ನೇಹಿತೆಯಾಗಿದ್ದರಿಂದ ಆಕೆ ನನಗೆ ಬಹಳ ವರ್ಷಗಳಿಂದ ಪರಿಚಯ ಎಂದರೆ ಸರಿ. ವಾದಿ ನನಗೆ ಕೊಟ್ಟ ನೋಟೀಸು ಮುಟ್ಟಿರುತ್ತದೆ. ದಿಃ 15-10-2017 ರಂದು  ನಾನು ವಾದಿಯ ಬಳಿ 6,00,000 ರೂ. ಸಾಲ ಪಡೆದು ನಿಪಿ-1 ಮತ್ತು 2 ರಂತೆ ದಾಖಲೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಲ್ಲಿರುವ ಸಹಿ ಮತ್ತು ಹೆಬ್ಬೆಟ್ಟು ನನ್ನದೇ ಎಂದರೆ ಸರಿ.ವಾದಿ ತಾನು ಕೊಟ್ಟ ಹಣವನ್ನು ಮರಳಿ ಕೊಡುವಂತೆ ಒತ್ತಾಯ ಮಾಡಿದಾಗ ನಾನು  ದಿಃ21-11-2019 ರಂದು ವಾದಿ ಚೀಟಿ ವ್ಯವಹಾರ ಮಾಡುತ್ತಾರೆಂದು ಸುಳ್ಳು ವಾದಿಸಿ ನೋಟೀಸು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಹಣಕ್ಕೆ ಶೇಕಡಾ

21 ರಂತೆ ಬಡ್ಡಿ ಕೊಡುತ್ತೇನೆಂದು ಒಪ್ಪಿ ಸಾಕ್ಷಿದಾರರ ಮುಂದೆ ನಿಪಿ-1 ಮತ್ತು 2 ರಂತೆ ದಾಖಲೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಹಾಕುವ ಕಾಲಕ್ಕೆ ನಾನು ವಾದಿಗೆ ಎಲ್ಲಾ ಸೇರಿ 8,97,000/- ರೂ. ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ವಾದಿಗೆ ಸದರಿ ಹಣವನ್ನು ಮರಳಿಸಬಾರದೆಂಬ ಉದ್ದೇಶದಿಂದ ಸುಳ್ಳು ನೋಟೀಸು ಕೊಟ್ಟು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಕಿರಣ್ ಕುಮಾರ್ ಡಿ. ವಡಿಗೇರಿ )**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ**. 14-10-2024.**